# 3

# ಸೇವಕನಾದ ಉಪದೇಶಕನು

## (1 ಥೆಸಲೊನೀಕ 2:1-12)

ಕಳೆದು ಹೋದ ಚಟುವಟಿಕೆಗಳು ಮತ್ತು ಸಂಬಂಧಗಳು ಮರೆಯಾಗುವವು, ಅಥವಾ ಅವುಗಳಿಂದ ನಾವುಗಳು ಕಲಿಯುವ ಸಾಧ್ಯತೆಯೂ ಇರಬಹುದು. ಹೊಸ ಒಡಂಬಡಿಕೆಯ, 1 ಥೆಸಲೊನೀಕ ಪತ್ರಿಕೆಯಲ್ಲಿ ಕಲಿಯುವ ಅನೇಕ ಸಂಗತಿಗಳು ಅಡಕವಾಗಿವೆ. ಅಧ್ಯಾಯ 2ರ ಅರ್ಧಭಾಗದಲ್ಲಿ ಪೌಲ, ಸಿಲ್ವಾನ ಮತ್ತು ತಿಮೊಥೆಯರ ಸಂಧಿಸುವಿಕೆಯ ಕುರಿತಾಗಿರುತ್ತದೆ. ಅವರೊಟ್ಟಿಗೆ ಇರುವಾಗ ಉಂಟಾಗ ಬಹುದಾದ ಬಾಂದವ್ಯದ ಕುರಿತು ಕಲಿಯಬಹುದಾದ ವಿಷಯದ ಬಗ್ಗೆ ಥೆಸಲೊನೀಕದವರಿಗೆ ನೆನಪುಮಾಡುತ್ತಿರುವನು. ಒಬ್ಬ ಉಪದೇಶಕನ ಕುರಿತಾಗಿ ಸಕಾರಾತ್ಮಕವಾಗಿ ವಿವರಣೆಯನ್ನು ನೀಡಲಾಗಿದೆ (2:3-6) ನಂತರ ಸಕಾರಾತ್ಮಕವಾಗಿ ಮಾತನಾಡಲಾಗಿದೆ (2:7-11), ಇದರಿಂದ ಹೊಸದಾದ ಕ್ರೈಸ್ತರು ಉತ್ತಮ ವಾದ ಮಾದರಿಯನ್ನು ತೋರಿ ಸಬೇಕು ಮತ್ತು ಶುಭ ಸಮಾಚಾರವನ್ನು ತಿಳಿಸಬೇಕು.

2:1-12ರಲ್ಲಿ, ಬರಹಗಾರನು ಕೊಚ್ಚಿಕೊಳ್ಳುತ್ತಿರುವನೋ ಎಂಬ ಸೂಚನೆಯು ಇರುತ್ತದೆ; ಆದರೆ ಅದರ ಪರಿಶೀಲನೆಯಲ್ಲಿ, ಸಂಬಂಧದಲ್ಲಿರುವ, ಮನೋಭಾವನೆಯಲ್ಲಿರುವ, ಮತ್ತು ಉದ್ದೇಶಗಳಲ್ಲಿ ಅಡಕವಾಗಿರುವ ಅರ್ಥವನ್ನು ಈ ಭಾಗದಲ್ಲಿ ನೋಡುತ್ತೇವೆ ಏಕೆ? ಈ ಹೊಸ ಕ್ರೈಸ್ತರಿಗೆ ಪ್ರೋತ್ಸಾಹವನ್ನು ಮತ್ತು ಸ್ಪೂರ್ತಿಯನ್ನು ನೀಡುವ ಅಭಿವೃದ್ಧಿಪಡಿಸುವ ಕಾರಣದಿಂದ ಬರೆಯಲಾಗಿದೆ. ಈ ವಚನಗಳು, ನಮ್ಮ ಮನೋಭಾವವನ್ನು ಸಂಬಂಧಗಳನ್ನು ಮತ್ತು ಆಕಾಂಕ್ಷೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯಿಸುತ್ತವೆ.

ಈ ಅಧ್ಯಾಯದಲ್ಲಿ ಪರಿಪಕ್ವತೆಗೆ ಬಂದ ಹೊಸ ಕ್ರೈಸ್ತರ ನಡುವೆ ಇರುವ ಪ್ರಾಮುಖ್ಯ ವಾದ ಸಂಬಂಧದ ಕುರಿತು ತಿಳಿಸಲಾಗಿದೆ, ಇದು ಕುಟುಂಬಗಳಲ್ಲಿರುವ ಬಲವಾದ ಬಾಂದವ್ಯಕ್ಕೆ ಹೋಲಿಕೆಯಾಗಿದೆ. ಈ ಸಂಬಂಧದ ಕುರಿತಾದ ಸ್ವಭಾವವನ್ನು ಮತ್ತು ಸಂಬಂಧದ ಆತ್ಮವನ್ನು ಕಂಡುಹಿಡಿಯುವುದಾದರೆ, ಅದು ನಿಮ್ಮನ್ನು ಅಭಿವೃದ್ಧಿಪಡಿಸಿ ಪರಿಪಕ್ವತೆಗೆ ನಡೆಸುತ್ತದೆ.

### ದೇವರ ಸೇವೆಯೇ ನಮ್ಮ ಗುರಿ (2:1-3)

ಇತರರೊಂದಿಗೆ ಪರಿಣಾಮಕಾರಿಯಾದ ಸಂಬಂಧವನ್ನು ಹೇಗೆ ಬೆಳಸಿಕೊಳ್ಳಬಹುದು? ಈ ಪ್ರಸಂಗಿಗಳು ಬಹಳ ಕಠಿಣವಾದ ಸಂದರ್ಭದಲ್ಲಿ ಇವರಲ್ಲಿಗೆ ಬಂದರು; ಆದರೆ ಅವರ ಬರೋಣವು ಉನ್ನತವಾದ ಉತ್ತೇಜನವಾಗಿತ್ತು (2:1). ಅವರ ಬರುವಿಕೆಯು, "ವ್ಯರ್ಥ" ಅಥವಾ "ನಿಷ್ಪ್ರಯೋಜಕವಾಗಿರಲಿಲ್ಲ." ನೀವು ಹೊಸ ಪಟ್ಟಣಕ್ಕೆ ಹೋಗುವಾಗ, ಅಲ್ಲಿರುವವರಿಗೆ ಆಶೀರ್ವಾದ ಮಾಡುವ ಅವಕಾಶವನ್ನು ಪಡೆಯಲು ಇಚ್ಛಿಸುವಿರಾ? ಅನೇಕ ಸಾರಿ ಈ ವಿಷಯದಲ್ಲಿ ನಮ್ಮ ಆಲೋಚನೆಯು "ಬರಿದಾಗಿರುತ್ತದೆ" "ಅಲಕ್ಷ್ಯವಾಗಿರುತ್ತದೆ"; ಮತ್ತು "ನಮ್ಮ ದಾರಿಯನ್ನೇ ನೋಡುತ್ತಿರುತ್ತೇವೆ"; ಬಹುಶಃ ಆಲೋಚಸುತ್ತೇವೆ, ನಾವು ನಮ್ಮ ಸಹೋದರರರನ್ನು ಅರಿತುಕೊಳ್ಳಬೇಕು, ಅಥವಾ "ಅಲ್ಲಿನ ಕಾರ್ಯಗಳನ್ನು ಪರಿಚಯಿಸಿಕೊಳ್ಳಬೇಕು."

ವಚನ 1ರಲ್ಲಿ ಹೊಸ ಸ್ಥಳದಲ್ಲಿ ಎಲ್ಲಾ ಮನುಷ್ಯರಿಗೂ ಒಳಿತನ್ನೆ ಮಾಡುವ ಅವಕಾಶವನ್ನು ಮಾಡಿಕೊಳ್ಳಬೇಕು. "ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತ ನಂಬಿಕೆಯುಳ್ಳವರಿಗೆ

ಮಾಡೋಣ" (ಗಲಾತ್ಯ 6:10). ನಾವು ಸಕಾರಾತ್ಮಕವಾಗಿ ನಗುಮುಖದಿಂದ, ಕೃಪೆಯ ಮಾತಿನಿಂದ, ಹಾಗೂ ಸಹಾಯಕವಾಗುವ ಕ್ರಿಯೆಗಳಿಂದ ಮಾಡುವಾಗ, ಮರೆಯಲಾರದಂಥ ವರ್ಚಸ್ಸನ್ನು ಬೀರಲು ಸಾಧ್ಯವಿದೆ. ಮೊದಲ ಪಾಠದಲ್ಲಿ ಗಮನಿಸಿದ ಚಟುವಟಿಕೆಳನ್ನು ನೆನಪುಮಾಡಿಕೊಳ್ಳಿರಿ. ಉತ್ತೇಜನ ಪಡಿಸುವದು ಕೃತಜ್ಞತೆ ಪ್ರಾರ್ಥನೆ ಹಾಗು ಪ್ರಸಂಗ, ಜನರ ಬೆಲೆ ಏನು ಎಂದು ನೆನಪುಮಾಡುವದು. ನಮ್ಮ ಬರುವಿಕೆಯು ಎಂದಿಗೂ "ವ್ಯರ್ಥವಲ್ಲ" ನಾವು ನಮ್ಮ ಗುರಿಯನ್ನು ಅರಿತಿದ್ದರೆ - ಯಾವ ಪರಿಸ್ಥಿತಿಯಲ್ಲೂ, ದೇವರನ್ನು ಸೇವಿಸಬಹುದು.

ಅವಕಾಶಗಳನ್ನು ಉಪಯೋಗಿಸಿಕೊಳ್ಳದೆ ಇರುವದಕ್ಕೆ ಯಾವಾಗಲೂ ಕಾರಣ ಗಳಿರಬಹುದು. ಸೋಲಿನ ಭಯದಿಂದ ಅಥವಾ ವಿರೋಧಿಗಳ ಭಯವು ಸರಿಯಾದ ಕಾರ್ಯಗಳನ್ನು ಮಾಡಲು ಅಡ್ಡಿಪಡಿಸಬಹುದು. ವಚನ 2, ವಚನ 1ರಲ್ಲಿರುವ ಪರಿಸ್ಥಿತಿಯನ್ನು ವಿವರಿಸುತ್ತದೆ. ಆ ಬೋಧಕರಿಗೆ ಫಿಲಿಪ್ಪಿಯಲ್ಲಿ "ಹಿಂಸೆಯು" ಅವಮಾನವು ಉಂಟಾಯಿತು ಅಪೊಸ್ತಲರ ಕೃತ್ಯಗಳು 16:19-23. ಅವರನ್ನು ಹಿಡಿದು ಅಧಿಕಾರಿಗಳ ಮುಂದೆ ತಂದರು, ಅವರನ್ನು ಚಡಿಗಳಿಂದ ಹೊಡೆದು ಸೆರೆಮನೆಯೊಳಗೆ ಹಾಕಿದರು.

ಒಂದು ವೇಳೆ ಈ ದಿವಸಗಳಲ್ಲಿ ಈ ವಿಧವಾದ ಹಿಂಸೆಗಳಲ್ಲಿ ಯಾವುದಾದರು ಒಂದು ಹಿಂಸೆ ನಮಗುಂಟಾದರೆ, ಇತರರಿಂದ ಅನುಕಂಪವನ್ನು ಮತ್ತು ಪರಿಹಾರವನ್ನು ನಾವು ಬಯಸುತ್ತೇವೆ, ಮತ್ತು ಕೆಲವು ವಾರಗಳ ವಿಶ್ರಾಂತಿಯನ್ನು ಬಯಸುತ್ತೇವೆ, ಹಲವು ಸಾರಿ ಈ ಸನ್ನಿವೇಶದಲ್ಲಿ, ಜನರು ಎಲ್ಲವನ್ನು ಬಿಟ್ಟು ಹೋಗುವ ಸಾಧ್ಯತೆಯೂ ಇರುತ್ತದೆ.

ಈ ಪ್ರಸಂಗಿಗಳು, ಫಿಲಿಪ್ಪಿಯಿಂದ ಅಂಪಿಪೋಲಿ ಅಪಲೋನ್ಯಕ್ಕೆ ಪ್ರಯಾಣಿಸಿ, ಥೆಸಲೊನೀಕಕ್ಕೆ ಬಂದರು, ಅಲ್ಲಿ ಯೆಹೊದ್ಯರ ಸಭಾಮಂದಿರದಲ್ಲಿ ಕ್ರಿಸ್ತನನ್ನು ಪ್ರಸಂಗಿಸಿದರು (ಅಪಸ್ತಲರ ಕೃತ್ಯಗಳು 17:1-3). ಅಲ್ಲಿ ವಿರೋಧದ ಫಲಿತಾಂಶ ಉಂಟಾಯಿತು - "ಹೆಚ್ಚಾದ ವಿರೋಧ" - ಆದಾಗ್ಯೂ ಅವರು ಪ್ರಸಂಗಿಸುತ್ತಲೇ ಇದ್ದರು! ಅವರ ಸಮಸ್ಯೆಯು ವಿರೋಧಿಗಳ ವಿರೋಧವನ್ನು ಮೀರಿಸಿತ್ತು. ಅವರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ಹೆಚ್ಚಾದ ವಿರೋಧ ಉಂಟಾಯಿತು ಎಂದು ಅನುವಾದ ಮಾಡಲಾಗಿದೆ, ಮತ್ತು ಹಿಂಸೆ ವ್ಯತ್ಯಾಸ, ಮತ್ತು ಸೋಲು ಎಂಬುದಾಗಿದೆ! ಥೆಸಲೊನೀಕದಲ್ಲಿ ಕ್ರೈಸ್ತರನ್ನು ಹಿಂಸಿಸುತ್ತಿದ್ದವರು, ಅವರನ್ನು ಘಾಸಿಗೊಳಿಸಿ, ಅವರ ಬೋಧಕರನ್ನು ಅರವತ್ತು ಮೈಲಿಗಳಷ್ಟು ದೂರವಿದ್ದ (ಒಂದು ನೂರು ಕಿಲೋಮೀಟರ್) ಬೆರೋಯಕ್ಕೆ ಹಿಂದಟ್ಟಿದ್ದರು, ಅಲ್ಲಿಯೂ ಅವರಿಗೆ ತೊಂದರೆ ಉಂಟಾಯಿತು! (ನೋಡಿರಿ ಅಪೊಸ್ತಲರ ಕೃತ್ಯಗಳು 17:13.)

ಪೌಲ, ಸೀಲ ಹಾಗೂ ತಿಮೊಥೆಯರ ಸಂಗಡ ದೇವರು ಇದ್ದದ್ದರಿಂದ, ಅವರು ಸುವಾರ್ತಾ ಪ್ರಚಾರದಲ್ಲಿ ಮುಂದುವರಿದರು. ಇಂಥಹ ಇನ್ನೊಂದು ಪರಿಸ್ಥಿತಿಯಲ್ಲಿ ಯೆರೂಸಲೇಮಿನ ಸಭೆಯವರು ಪ್ರಾರ್ಥಿಸಿ, ವಿರೋಧಿಗಳ ವಿರೋಧದ ಮಧ್ಯದಲ್ಲಿ ಅಪೊಸ್ತಲರು "ದೃಢವಿಶ್ವಾಸವನ್ನು" ಹೊಂದಿ, ದೇವರ ವಾಕ್ಯದ ಮುಂದುವರಿಕೆ ಉಂಟಾಗಲಿ ಎಂದು ಬಯಸಿದರು (ಅಪೊಸ್ತಲರ ಕೃತ್ಯಗಳು 4:29).

ಸಂದಿಗ್ಧ ಪರಿಸ್ಥಿತಿಗಳಲ್ಲಿ ನಾವು ನಿರುತ್ತೇಜನಗೊಂಡು, ಸೋತು ಹೋಗ ಬಹುದು, ಮತ್ತು ಸೇವೆಯನ್ನು ನಿಲ್ಲಿಸಿಬಿಡಬಹುದು. ನಾವು ಈ ಸವಾಲುಗಳ ಹೆಚ್ಚಿನ ಅವಕಾಶವನ್ನು ನೋಡಿ, ದೇವರ ಇಚ್ಛೆಗೆ ಅನುಗುಣವಾಗಿ ಬದುಕಬೇಕೆಂದು ದೇವರು ಆಶಿಸುತ್ತಾನೆ. ಅದು ದೇವರನ್ನು ಮಹಿಮೆ ಪಡಿಸುವ ಹೆಚ್ಚಿನ ಅವಕಾಶವಾಗಿದೆ, ಅದರಲ್ಲಿ ನಾವು ಒಳ್ಳೆ ಮಾದರಿಯನ್ನು ತೋರಿಸಬೇಕು, ಮತ್ತು ಇಂತಹ ಹಿಂಸೆಯಲ್ಲಿರುವವರಿಗೆ ಉತ್ತೇಜನವನ್ನು ನೀಡಬೇಕು.

ತಪ್ಪಾದ ಮನೋಭಾವನೆಯಿಂದ ಸರಿಯಾದದ್ದನ್ನು ಮಾಡುವ ಸಾಧ್ಯತೆ ಇದೆ, ಆದರೆ ದೇವರು ನಮ್ಮನ್ನು ಪೂರ್ಣವಾಗಿ ನೋಡುತ್ತಾನೆ. ನಮ್ಮ ಹೃದಯವು ಸರಿಯಿಲ್ಲದಿದ್ದರೆ, ನಮ್ಮ ಕ್ರಿಯೆಗಳು ಕಪಟದಿಂದ ಇರುತ್ತವೆ. ನಮ್ಮ ಉದ್ದೇಶಗಳನ್ನು ಪರೀಕ್ಷಿಸಿಕೊಂಡು ಜನರಿಗೆ ನಮ್ಮ ಒಳ್ಳೇ ಕ್ರಿಯೆಗಳ ಕುರಿತು ತಿಳಿಸಬೇಕು. ಈ ಪ್ರಸಂಗಿಗಳು ತಮ್ಮ ಉದ್ದೇಶಗಳು

ಯೋಗ್ಯ ಮತ್ತು ಯಥಾರ್ಥವಾದವುಗಳು ಎಂದು ದೃಢೀಕರಿಸಿದರು (2:3). ಅವರು ಒಳ್ಳೆಯ ಸಾಕ್ಷಿಯನ್ನು ಹೊಂದಿದ್ದರು, ಯಾಕಂದರೆ, "ಒಬ್ಬ ಉಪದೇಶಕನಲ್ಲಿ ಇರಬಹುದಾದ," "ಅಬದ್ಧತೆ," "ಅಶುದ್ಧತೆ," ಮೋಸಗಳು ಇತರರ ಜೀವಿತಕ್ಕೆ ಅಪಾಯ ಉಂಟುಮಾಡುತ್ತದೆ ಎಂದು ಅವರು ಅರಿತಿದ್ದರು. ಅದಕ್ಕೆ ವ್ಯತಿರಿಕ್ತವಾಗಿ, ದೈವ ಭಕ್ತಿಯ ಜೀವಿತದ ಮಾದರಿಯು ಸಹ ಬಹುಬೆಲೆಯುಳ್ಳದ್ದಾಗಿತ್ತು ಎಂದು ತಿಳಿದಿದ್ದರು.

ದೈವ ಭಕ್ತಿಯಿಂದ ಕೂಡಿರುವ ಕಾರ್ಯಗಳನ್ನು ದೇವರು ಬಯಸುವನು, ಆದರೆ, ಮೊದಲನೆಯದಾಗಿ ದೇವರು ಹೃದಯವನ್ನೇ ನೋಡುತ್ತಾನೆ - ಅದರ ಮನೋಭಾವನೆ, ಉದ್ದೇಶ, ಅದರ ಹಿನ್ನೆಲೆಯನ್ನು ನೋಡುತ್ತಾನೆ. ಆದಿ ಸಭೆಯಲ್ಲಿ ಕೆಲವರು ತಪ್ಪಾದ ಅಭಿಪ್ರಾಯದಿಂದ ಸುವಾರ್ತೆ ಸಾರುತ್ತಿದ್ದರು (ಫಿಲಿಪ್ಪಿ 1:15-17). ಪೌಲನ ಸುವಾರ್ತೆಯಲ್ಲಿ ಯಾವುದೇ ದೋಷವು ಇಲ್ಲದಿದ್ದರೂ, ಕೆಲವು ಜನರು ಅವನಲ್ಲಿ ತಪ್ಪು ಕಂಡು ಹಿಡಿಯುತ್ತಿದ್ದರು, ಅದರಲ್ಲಿ ಅವನ ಉದ್ದೇಶವೇನು ಎಂದು ಪ್ರಶ್ನಿಸುತ್ತಿದ್ದರು, ಮತ್ತು ಅವನ ತೋರಿಕೆ ಮತ್ತು ಪ್ರಚಾರದ ಕುರಿತು ಪ್ರಶ್ನಿಸಿದರು (2 ಕೊರಿಂಥ 10:10). ಆದಾಗ್ಯೂ, ಅವನು ತನ್ನ ಕೇಳುಗರಿಂದ ಹಣವನ್ನಾಗಲೀ ಗೌರವವನ್ನಾಗಲೀ ಬಯಸಲಿಲ್ಲ ಎಂದು ಹೇಳಿದನು (2:6, 9).

ಜನರು ನಮ್ಮ ಅಂತರ್ಯವನ್ನು ನೋಡಲು ಅಸಾಧ್ಯ, ಆದರೆ ದೇವರು ಅದನ್ನು ತಿಳಿದಿರುವನು. ನಮ್ಮ ಅಂತರ್ಯವನ್ನು ಪರೀಕ್ಷಿಸಿಕೊಳ್ಳುವುದೇ, ಕ್ರೈಸ್ತರ ಪ್ರಾಮುಖ್ಯವಾದ ಸಂಗತಿಯಾಗಿರುತ್ತದೆ. ಇತರರು ನಮ್ಮನ್ನು ಸುಲಭವಾಗಿಯೂ ಮತ್ತು ದ್ವೇಷದಿಂದಲೂ ತೀರ್ಪುಮಾಡಬಹುದು, ಆದರೆ ದೇವರು ಯಥಾರ್ಥವಾದ ತೀರ್ಪನ್ನು ಮಾಡುತ್ತಾನೆ.

ನಾವು ಜೀವಿಸುವಂಥ ಜೀವಿತವನ್ನು ದೇವರು ಯಾವ ರೀತಿಯಲ್ಲಿ ದೃಷ್ಟಿಸುವನು? ನಮ್ಮ ಉದ್ದೇಶಗಳಲ್ಲಿ ದೇವರು ಹೊಂದಿರುವ ಲೆಕ್ಕಾಚಾರವನ್ನು ಪರಿಗ್ರಹಿಸುವುದು ಅಸಾಧ್ಯ, ಯಾಕಂದರೆ ಮನುಷ್ಯನ ಲೆಕ್ಕಾಚಾರವು ಅದರಲ್ಲಿ ಒಳಗೊಳ್ಳುತ್ತದೆ. ಯಾರು ನಮ್ಮನ್ನು ಟೀಕಿಸದೆ ಇರುವಾಗ, ನಾವು ಒಳ್ಳೆಯ ಕಾರ್ಯವನ್ನೆ ಮಾಡುತ್ತಿರುವೆವು ಎಂದು ತಿಳಿಯತ್ತೇವೆ, ಒಂದು ವೇಳೆ ಅನೇಕರು ನಮ್ಮನ್ನು ಟೀಕಿಸುವುದಾದರೆ, ನಾವು ಬೇಗನೆ ದೃತಿಗೆಡುತ್ತೇವೆ. ಕ್ರೈಸ್ತರಾದ ನಾವುಗಳು, ದೇವರು ನಮ್ಮನ್ನು ಅರಿತಿರುವನು ಮತ್ತು ನಮ್ಮ ಧ್ಯೇಯಗಳನ್ನು ತಿಳಿದಿರುವನು ಎಂದು ತಿಳಿದುಕೊಳ್ಳಬೇಕು. ದೇವರು ನಮ್ಮ ಆಲೋಚನೆಯನ್ನು ಮತ್ತು ಕ್ರಿಯೆಗಳನ್ನು ನೋಡುವಾಗ, ನಾವು ಸಂತೋಷಿಸಬೇಕು.

ಥೆಸಲೊನೀಕದ ಇತರರು, ಪೌಲ, ಸೀಲ ಹಾಗೂ ತಿಮೊಥೆಯರನ್ನು ಕಟುವಾಗಿ ಟೀಕಿಸಿದ್ದರು, ಕೆಲವು ಸಹೋದರರು ಸಹ ಅವರನ್ನು ಟೀಕಿಸಿದ್ದರು, ಇದರ ನಿಮಿತ್ತ ಅವರಲ್ಲಿ ಉಂಟಾದ ಪ್ರತಿಕ್ರಿಯೆ ಏನು? ದೇವರು ಅವರ ಹೃದಯಗಳನ್ನು ಪರಿಶೋಧಿಸಿದಕ್ಕಾಗಿ ಆನಂದಗೊಂಡರು. ಆ ಉಪದೇಶಕರು ದೇವರಿಂದ ಪ್ರೇರಿತಗೊಂಡು ಸುವಾರ್ತೆಯನ್ನು ಸಾರಿದ ಸ್ವಭಾವವನ್ನು ದೇವರು ಮೆಚ್ಚಿದನು, ಸುವಾರ್ತಾ ಪ್ರಸಾರಣೆಯಲ್ಲಿ ಅವರು ಯಥಾರ್ಥತೆಯನ್ನು ತೋರಿ ದರು. ಅವರ ಜೀವಿತ ಹಾಗು ಉದ್ದೇಶ ಸಂತೃಪ್ತಿಕರವಾಗಿತ್ತು.

ಸುವಾರ್ತೆಯು ಬೆಲೆಯುಳ್ಳ ಸಂದೇಶವಾಗಿದೆ, 2 ಕೊರಿಂಥ 4:7ರಲ್ಲಿ ಅದನ್ನು "ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ಇದೆ" ಎಂದು ಹೇಳಲಾಗಿದೆ. ಆ ಸಂದೇಶದ ಪ್ರತಿಬಿಂಬವನ್ನು ಹೊಂದಿರುವ ಕ್ರೈಸ್ತ ಜೀವಿತವು ಅದನ್ನು ಬೆಲೆಯುಳ್ಳದ್ದೆಂದು ಪರಿಗಣಿಸ ಬೇಕು. ನಮ್ಮ ಸುತ್ತಲಿರುವವರು ನಮ್ಮ ಬಾಹಿರ ಕಾರ್ಯಗಳನ್ನು ನೋಡುವಾಗ, ದೇವರು ನಮ್ಮ ಹೃದಯಗಳನ್ನು ಗಮನಿಸುತ್ತಿರುತ್ತಾನೆ, ನಮ್ಮ ನಿರ್ಧಾರದ ನಿರ್ಣಯಗಳು ಸರಿಯಾಗಿವೆಯೋ ಎಂದು ವಿವೇಚಿಸುತ್ತಾನೆ. ಕ್ರಿಯೆಗಳು ತಲಾಂತನ್ನು ತರಬೇತಿಯನ್ನು ಪ್ರಕಟಪಡಿಸಬಹುದು, ಆದರೆ ಹೃದಯದ ಸ್ವಭಾವವು, ದೇವರಿಗೆ ನಿಜವಾದ ವ್ಯಕ್ತಿತ್ವವನ್ನು ಪ್ರಚುರ ಪಡಿಸುತ್ತದೆ. ದೇವರು ಸಮುವೇಲನಿಗೆ, "ಮನುಷ್ಯನು ಹೊರಗಿನ ತೋರಿಕೆಯನ್ನು ನೋಡುವಂತೆ ನೋಡದೆ, ದೇವರು ಹೃದಯಗಳನ್ನು ನೋಡುವ ಹಾಗೆ ಎಂದು ತಿಳಿಸಿರುವನು" (1 ಸಮುವೇಲ 16:7ಬಿ).

## ಕ್ರೈಸ್ತರ ಚಿಂತನೆಯೇ ನಮ್ಮ ಪಾತ್ರವಾಗಿದೆ (2:4-11)

ಉಪದೇಶಕರ ಸ್ವಭಾವದ ಕುರಿತ ಎರಡು ಸಾಕ್ಷಿಗಳಾದ, ದೇವರು ಮತ್ತು ಥೆಸಲೊನೀಕ ಸಭೆಯವರು ಥೆಸಲೋನಿಕೆಯಲ್ಲಿದ್ದರು, ದೇವರು ತನ್ನ ಸುವಾರ್ತೆಯನ್ನು ಅವರ ಕೈಗೆ ಒಪ್ಪಿಸಿಕೊಟ್ಟಿದ್ದನು (2:4). ಅವುಗಳು ಥೆಸಲೊನೀಕಕ್ಕೆ ಬಂದಾಗ, ಅವರು ಎಂತಹ ಉಪದೇಶಕರಾಗಿದ್ದರು ಎಂದು ಅವರು ತಿಳಿದರು (1:5).

**ಚಿಂತನೆಯಲ್ಲಿ, ಹೆಚ್ಚಳಿಕೆಯು ಇರುವದಿಲ್ಲ (ವಚನಗಳು 5, 6)**

ಪೌಲ, ಸೀಲ, ಹಾಗು ತಿಮೊಥೆಯರು ಹೆಗ್ಗಳಿಕೆಗಾಗಲೀ ಅಥವಾ ತಮ್ಮ ಆಶೆಗಳನ್ನು ತೃಪ್ತಿಪಡಿಸುವಂತ ಹಣ ಸಂಪಾದನೆಗಾಗಲೀ ಸುವಾರ್ತೆಯನ್ನು ಸಾರಲಿಲ್ಲ. ದೇವರು ಮತ್ತು ಥೆಸಲೊನೀಕದವರು ಇದನ್ನು ಅರಿತಿದ್ದರು (2:5).

ಕೊರಿಂಥದ ಸಹೋದರರಿಗೆ, ಪೌಲನು ಬರೆಯುವಾಗ, "ಇವುಗಳನ್ನು ಮಾನುಷ್ಯಜ್ಞಾನವು" ಕಲಿಸಿದ ಮಾತುಗಳಿಂದ ಹೇಳದೆ, "ಬಲಹೀನತೆಯಿಂದಲೂ ... ಭಯದಿಂದಲೂ ಮತ್ತು ... ಬಹಳವಾಗಿ ನಡುಗುತ್ತಲೂ ಸಾರಿದೆವು ಎಂದನು" (1 ಕೊರಿಂಥ 2:1, 3). ಅವರು ಸುವಾರ್ತೆಯನ್ನು ಸಾರಿದ ಶೈಲಿಗೆ ಒಳಗಾಗದೆ, ಸುವಾರ್ತೆಗೆ ಒಳಗಾಗ ಬೇಕೆಂದು ಅವನು ಬಯಸಿದನು ಸತ್ಯವನ್ನಾಗಲೀ ಅಥವಾ ಸುಳ್ಳನ್ನಾಗಲೀ ಬೋಧಿಸಲು ಅನುಭವದ ಒತ್ತಾಯ, ಮಾತಿನ ಚಾಣುಕ್ಯತನವನ್ನು ಉಪಯೋಗಿಸಬಹುದು. ಆದರೆ ಪೌಲನು ತಿಳಿಸಿ, ಸುವಾರ್ತೆಯ ಸರಳವಾದ ಸಂದೇಶವು ಮಾತ್ರ ಅವರಲ್ಲಿ, ಪ್ರಭಾವವನ್ನು ಬೀರಲು ಸಾಧ್ಯ ಎಂದನು.

ಪೌಲನು ಮತ್ತು ಅವನ ಜೊತೆ ಕೆಲಸದವರು, ಥೆಸಲೊನೀಕದವರಿಗೆ ಯಾವುದೇ ವ್ಯಕ್ತಿಗಳ ಬಗ್ಗೆ ಕಲ್ಪನೆಗಳನ್ನು ನೀಡದೇ ಸತ್ಯವನ್ನು ನೇರವಾಗಿ ಪ್ರಸಾರ ಮಾಡಿದ್ದರು - ಸಂದೇಶ ನೀಡಿದವರನ್ನು ಅವರು ಕೊಂಡಾಡದೆ, ಸುವಾರ್ತೆಗೆ ಮಾನ್ಯತೆ ನೀಡಬೇಕೆಂದರು (2:6). ಜನರು ನಮ್ಮನ್ನು ಕುರಿತು "ಎಂಥಾ ದೊಡ್ಡ ಬೋಧಕನು!" ಅಥವಾ "ಎಂಥಾ ಪ್ರಾಯೋ ಜನೆ!" ಎಂದು ಹೇಳದೆ, "ಎಂಥಾ ದೇವರ ಸಂದೇಶ ಎಂದು ಹೇಳಬೇಕು!"

ಪೌಲನು ತನ್ನ ಕೆಲಸದಿಂದ ಲಾಭವನ್ನಾಗಲಿ ಅಥವಾ ಸ್ತುತಿಯನ್ನಾಗಲಿ ಬಯಸಲಿಲ್ಲ. ಅಪೊಸ್ತಲರಾಗಿ (ಆರಿಸಲ್ಪಟ್ಟು ಮತ್ತು ನಿರ್ಧಿಷ್ಟ ಕಾರ್ಯದ ನಿಮಿತ್ತ ಕಳುಹಿಸಲ್ಪಟ್ಟ ಜನರು), ಪೌಲ, ಸೀಲ, ಮತ್ತು ತಿಮೊಥೆಯರು ದೇವರ ಆದೇಶಗಳನ್ನೇ ನೀಡಿದರು. ಒಂದು ಚಿಕ್ಕ ಪ್ರಾಂತ್ಯದಲ್ಲಿದ್ದ ಜನರಿಗೆ, ಈ ಅಪೋಸ್ತಲರ ಸಂಧಿಸುವಿಕೆಯು, ಅವರ ಜೀವನದಲ್ಲಿ ಮರೆಯಲಾರದ ಅನುಭವವಾಗಿತ್ತು. ನಮಗೂ ಸಹ. ನಾವು ಅವರಿಗೆ ಮುಖ್ಯ ಸ್ಥಾನವನ್ನು ನೀಡುತ್ತಿದ್ದೆವು. ಅವರನ್ನು ಅಪೊಸ್ತಲರೆಂದು ಪರಿಚಯಿಸಿ, ಎಲ್ಲರೂ ಅವರನ್ನು ಅಭಿನಂಧಿಸುವಂತೆ ಪ್ರಕಟನೆಯನ್ನು ಮಾಡುತ್ತಿದ್ದೆವು. ಆದರೆ ಪೌಲನು ನಾವು ಈ ಕಾರ್ಯದ ನಿಮಿತ್ತ ಬಂದವರಲ್ಲಿ ಎಂದು ಸ್ಪಷ್ಟಪಡಿಸಿದನು.

ಪೌಲನು ಪ್ರಭಾವ ಬೀರುವಂತ ಅನೇಕ ಸಂಗತಿಗಳನ್ನು ಹೊಂದಿದ್ದನು. ಫಿಲಿಪ್ಪಿ 3:4-8ರಲ್ಲಿ ಆ ಕಾರ್ಯಗಳನ್ನು ನಮೂದಿಸಿರುವನು; ಆದರೆ ಅವರ ಆತ್ಮೀಕ ಜೀವನವನ್ನು ಎತ್ತಿ ಹಿಡಿಯುವ ನಿಮಿತ್ತ ಅವೆಲ್ಲವನ್ನು "ಕಸವೆಂದು" ಎಣಿಸಿದನು! ಅವನು ಅಪೊಸ್ತಲನಾಗಿದ್ದರಿಂದ, ಜನರು ಅವನ ಪಾತ್ರವನ್ನು ಅರಿತು ಹೇಳಿದಂತೆ ಮಾಡಲು ಸಾಧ್ಯವಿತ್ತು! ಮುಂದಿನ ವಚನಗಳಲ್ಲಿ, ಅವರಿಗೆ ಅಪ್ಪಣೆ ನೀಡುವ ಪಾತ್ರವನ್ನು ನೀಡಲಾಗಿದ್ದರು, ನಿಜವಾದ ಅಪೊಸ್ತಲನ ಪಾತ್ರ ಸೇವಕನ ಸ್ಥಾನ ಎಂದು ತಿಳಿಸಿದನು.

ಕೆಲವು ಪ್ರಸಂಗಿಗಳು ಮತ್ತು ಬೋಧಕರುಗಳು, ಜನರು ತಮಗೆ ಅಭಿಮಾನವನ್ನು ಮತ್ತು ಹಣವನ್ನು ನೀಡಲಿ ಎಂದು ಕೆಲವು ಸಾರಿ ಬೋಧಿಸುವರೇ ವಿನಃ ಜನರನ್ನು ದೇವರ ಕಡೆಗೆ ನಡೆಸುವದಿಲ್ಲ. ಕೆಲವು ಪ್ರಸಂಗಿಗಳು ಚೌಕ ಚಕ್ಯತೆಯಿಂದ ಪ್ರಸಂಗಿಸಿ, ಜನರ ಮನಸ್ಸನ್ನು

ತಮ್ಮ ಕಡೆಗೆ ಸೆಳೆದು, ಜನರು ಅವರ ಸುತ್ತಲೂ ಇರುವಂತೆ - ಕಚೇರಿಗಳನ್ನು ತೆಗೆದು, ಜನರು ಅವರನ್ನು ವಂದಿಸುವಂತೆ, ತಮ್ಮ ಹೆಸರುಗಳನ್ನು ಮುದ್ರಿಸಿಕೊಳ್ಳುವರು. ಆದರೆ ಆತ್ಮೀಕ ಜೀವಿತವು ಅವರ ಜೀವಿತದಲ್ಲಿ "ಸೊನ್ನೆ" ಯಾಗಿರುತ್ತದೆ. ಪ್ರಸಂಗಿಯು, ಜನರ ಮನಸ್ಸನ್ನು ಯೇಸುವಿನ ಕಡೆಗೆ ತಿರುಗಿಸಬೇಕು, ಅವರು ನಿಮ್ಮನ್ನು ಆಧಾರ ಮಾಡಿಕೊಳ್ಳದೆ, ಯೇಸು ರಕ್ಷಕನನ್ನೇ ಆಧಾರಮಾಡಿಕೊಳ್ಳಬೇಕು!

ಒಂದು ವೇಳೆ, ನಮ್ಮ ಪಾತ್ರದ ವರದಾನಗಳ ಅಥವಾ ನಮ್ಮ ಸಾಧನೆಗಳನ್ನೆ ಮಹಿಮೆ ಪಡಿಸಿಕೊಳ್ಳುವುದಾದರೆ, ನಾವು ಹೊರಗೆ ಹೋಗಿ ನಮ್ಮ ಕಸದ ತೊಟ್ಟಿಯನ್ನು ಬರಿದು ಮಾಡಿಕೊಳ್ಳಬೇಕು. ಮಾನಸಿಕವಾಗಿ, ನಮ್ಮ "ದೊಡ್ಡಸ್ತಿಕೆಯನ್ನು" ಅದು ಇರಬೇಕಾದ ಸ್ಥಳದಲ್ಲೇ ಇಡಬೇಕು, "ದೇವರ ವಾಕ್ಯವು ಬರೆದಿರುವದನ್ನು ನೆನಪುಮಾಡಿಕೊಂಡು ಹೊಗಳಿಕೊಳ್ಳುವವನು, ಕರ್ತನಲ್ಲಿಯೇ ಹೊಗಳಿಕೊಳ್ಳಲಿ" (1 ಕೊರಿಂಥ 1:31).

**ಚಿಂತನೆಯು ಸೌಮ್ಯ ಸ್ವಭಾವವನ್ನು ಒಳಗೊಂಡಿರುತ್ತದೆ (ವಚನಗಳು 7, 8)**

ಕ್ರೈಸ್ತರು, ಇತರರೊಂದಿಗೆ ಕೆಲಸ ಮಾಡುವಾಗ, ಯಾವ ರೀತಿಯಲ್ಲಿ ವರ್ತಿಸ ಬೇಕು? ಪೌಲ, ಸೀಲ, ಮತ್ತು ತಿಮೊಥೆಯರು, ಹಸುಗೂಸಿನ ತಾಯಿಯಂತಿದ್ದರು (2:7). ಚಿಕ್ಕ ಮಕ್ಕಳಿಗೆ ಮೀಸಲಿಡುವ ಸಮಯ, ಪೋಷಣೆ, ಮತ್ತು ಸಂರಕ್ಷಣೆಯನ್ನು ಗಮನಿಸು ವಾಗ, ನಾವುಗಳು ಎಂತಹ ಪಾಠಗಳನ್ನು ಕಲಿಯಬಹುದು! ಮಾತನಾಡದ, ನಡೆದಾಡದ ಅಸಾಹಯಕ ಮಗುವಿಗೆ ದಾದಿ ಅಥವಾ ತಾಯಿ ನೀಡುವ ಕಳಕಳಿಯನ್ನು ಗಮನಿಸಿರಿ. ಆ ಮಗುವಿಗೆ ಅಗತ್ಯವಿರುವ ಪೋಷಣೆಯನ್ನೇ ತಾಯಿಯು ಕನಿಕರದಿಂದಲೂ ಮತ್ತು ಸೌಮ್ಯತೆಯಿಂದಲೂ ನೀಡುವಳು. ಇದರಿಂದ ಆ ಮಗುವಿನ ಎಳೆ ಜೀವಿತಕ್ಕೆ ಯಾವುದೇ ಅಪಾಯವು ಸಂಭವಿಸಲಾರದು. ದೇವರು ಅನುಗ್ರಹಿಸಿರುವ ಜೀವವು ಆಕೆಯ ಕೈಯಲ್ಲಿದೆ! ಇದು ಪ್ರಸಂಗಿಯ ಸ್ವರವಾಗಿದೆಯೇ?

ನಮ್ಮ ಪ್ರಸಂಗಿಗಳ ತರಬೇತಿ ಸಂಸ್ಥೆಯಲ್ಲಿ; "ಪಾರಿವಾಳದಂತೆ ನಿಷ್ಕಪಟಿಗಳೂ, ಸರ್ಪದಂತೆ ಜಾಣರು" (ಮತ್ತಾಯ 10:16)? ಆಗಿರುವಂತ ತರಬೇತಿಯನ್ನು ನಮ್ಮ ಪ್ರಸಂಗಿಗಳಿಗೆ ಬೋಧಿಸುತ್ತಿರುವೆ. ನಾನು ಪ್ರಸಂಗಿಗಳ ತರಬೇತಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಒಬ್ಬ ಪ್ರಸಂಗಿಗೆ ಪ್ರಮುಖವಾಗಿ "ಸೌಮ್ಯತೆಯು" ಇರಬೇಕು ಎಂದು ಹೇಳಿ, ಒಬ್ಬ ಪ್ರಸಂಗಿಯು ಕೆಲವು ವಿದ್ಯಾರ್ಥಿಗಳನ್ನೂ ಸೇವೆಗೆ ಒಪ್ಪಿಸಿಕೊಟ್ಟರು (2 ತಿಮೊಥೆ 2:25). ಅಲ್ಲಿಯವರೆಗೆ ನಾನು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ; ಆದರೆ ಪ್ರಸಂಗಿಗಳ, ಬೋಧಕರ, ಹಿರಿಯರ, ಮತ್ತು ಮೇಲ್ವಿಚಾರಕರ ತರಬೇತಿಯಲ್ಲಿ "ಸೌಮ್ಯತೆಯೇ" ಮೂಲ ಗುರಿಯಾಗಿರಬೇಕು. ಶಕ್ತಿ, ಬಲ, ಅಧಿಕಾರಕ್ಕಾಗಿ ನಾವು ಹಾತೊರೆ ಯುವುದಾದರೆ ಯೇಸುವಿನ ಕೆಲಸದ ವಿವರಣೆಯನ್ನು ನೆನಪು ಮಾಡಿಕೊಳ್ಳೋಣ: "ಜಜ್ಜಿದ ದಂಟನ್ನು ಮುರಿದು ಹಾಕದೆಯೂ, ಆರಿಹೋಗುತ್ತಿರುವ ದೀಪವನ್ನು ನಂದಿಸದೆಯೂ ಇದ್ದ, ..." (ಮತ್ತಾಯ 12:20).

ಸಂದೇಶಕ್ಕೂ ಮತ್ತು ಸಂದೇಶಕನ ನಡುವೆಯು ಸಾಮರಸ್ಯ ಇರಬೇಕೆಂದು ದೇವರು ಇಚ್ಛಿಸುತ್ತಾನೆ. ನಮ್ಮಲ್ಲಿರುವ ಉತ್ತಮವಾದದ್ದು ದೇವರ ದೃಷ್ಟಿಯಲ್ಲಿ ಅಪರಿಪೂರ್ಣವಾದದ್ದು ಆಗಿರುವದರಿಂದ, ನಮಗೆ ದೇವರ ಕ್ಷಮಾಪಣೆಯ ಅಗತ್ಯತೆ ಇರುತ್ತದೆ. ದೇವರು ಪಾಪವನ್ನು ಹೇಳಿ, ಸಂದೇಶದಲ್ಲಿ ತನ್ನ ನೀತಿಯನ್ನು ಪ್ರಭಾವಗೊಳಿಸುತ್ತಾನೆ, ಆ ವಿಧ ವಾದ ಸಂದೇಶವು ನಮ್ಮ ಜೀವಿತದ ಅಂತರಾಳದಿಂದ ಉದ್ಭವಿಸಬೇಕು.

ಥೆಸಲೊನೀಕ ಕ್ರೈಸ್ತರು ಕುಟುಂಬದಲ್ಲಿ ಹೊಸಬರಾಗಿದ್ದರಿಂದ, ಪೌಲ ಮತ್ತು ಅವನ ಸಹ ಕೆಲಸಗಾರರು, "ಪೋಷಕರು" ಮತ್ತು "ಮಕ್ಕಳ" ನಡುವೆ ಇರುವ ಅನ್ಯೋನ್ಯತೆಯನ್ನು ಅವರಿಗೆ ನೀಡಿದರು. ಅದನ್ನು "ಪ್ರೇಮದ ಸಹಬಾಳ್ವೆ" ಎಂದು ವಿವರಿಸಲಾಗಿದೆ, ಯಾಕೆಂದರೆ

ಅವರು, ಈ ಕೆಲಸಗಾರರಿಗೆ ಸಮೀಪಸ್ಥರಾಗಿದ್ದರು (2:8). ಇದೇ ವಿಧವಾದ ವಿವರಣೆಯನ್ನು 1 ಪೇತ್ರ 1:22 ಹೊಸ ಕ್ರೈಸ್ತರ ಕುರಿತು, ಹಾಗು ದೇವ ಜನರ ದೇಹದ ಸಂಬಂಧದ ಕುರಿತು "ನೀವು ನಿಷ್ಕಪಟವಾದ ಸಹೋದರ ಸ್ನೇಹವುಳ್ಳವರಾಗಿರತಕ್ಕದ್ದು" ಎಂದು ತಿಳಿಸಲಾಗಿದೆ. ಈ ಪತ್ರಿಕೆಯ ಅಂತ್ಯದಲ್ಲಿ ಈ ವಿಧವಾದ ಸ್ನೇಹದ ಬಗ್ಗೆ ಒತ್ತಿ ಹೇಳಲಾಗಿದೆ (4:9, 10).

ಹೊಸ ಕ್ರೈಸ್ತರ ಪರಿಸರವು ಕುಟುಂಬ ಹಾಗು ಸ್ನೇಹಿತರ ನಡುವೆ ಇರುವ ಬಾಂದವ್ಯದಿಂದ ಆವರಿಸಿರಬೇಕು ಎಂದು ದೇವರು ಬಯಸುತ್ತಾನೆ. ಅವರು ಕುಟುಂಬದ ಸಹೋದರರಾಗಿರಬೇಕು ಆ ಬಾಲ ಪ್ರಾಯದ ಕ್ರೈಸ್ತರು ತಮ್ಮ ದೈಹೀಕ ಕುಟುಂಬದಿಂದಲೂ, ನೆರೆಹೊರೆಯವರಿಂದಲೂ, ಹಿಂಸೆಗೆ ಒಳಪಟ್ಟು, ತಿರಸ್ಕರಿಸಲ್ಪಟ್ಟು ಗತಿಹೀನರಾಗಿಯೂ, ನಿರ್ಗತಿಕರಾಗಿಯೂ ಇರುವಂಥ ಸಂಧರ್ಭದಲ್ಲಿ ಈ ಬಾಂದವ್ಯವು ಅವರನ್ನು ಉತ್ತೇಜನ ಗೊಳಿಸುತ್ತಿತ್ತು, ಮತ್ತು ಅವರು ವಿಗ್ರಹಗಳನ್ನು ಬಿಟ್ಟು ಸತ್ಯ ದೇವರನ್ನೇ ಸೇವಿಸುವದಕ್ಕೆ ಅವಕಾಶಮಾಡಿಕೊಡುತ್ತಿತ್ತು. ಅವರು ಈ ದೇವರ ಕುಟುಂಬದ, ಹಾಗೂ ಸಮೂಹದ ನಡುವೆ ಸಂರಕ್ಷಣೆಯ ಅನುಭವವನ್ನು ಹೊಂದಲು ಸಾಧ್ಯವಾಯಿತು.

ಹೊಸದಾಗಿ ಪರಿವರ್ತನೆಗೊಂಡವರಲ್ಲಿ ಬಲವಾದ ಕೌಟುಂಬಿಕ ಬಾಂದವ್ಯವು ಸೃಷ್ಟಿಯಾಗಿದ್ದರಿಂದ, ಅಪೊಸ್ತಲರು ಸುವಾರ್ತೆಯನ್ನು ಮತ್ತು ಅವರ ಜೀವಿತವನ್ನು ಅವರೊಂದಿಗೆ ಹಂಚಿಕೊಂಡರು. ಅವರು, ಅವರ ಸಂದೇಶಗಳನ್ನು ಕೇಳಿ, ಆ ಸಂದೇಶದ ಕಾರ್ಯವನ್ನು ತಮ್ಮ ಜೀವಿತದಲ್ಲಿ, ಪ್ರಚುರಪಡಿಸಿದನು, ಅದನ್ನು ಅವರು ನೋಡಲು ಅಪೇಕ್ಷಿಸಿದರು. ಒಬ್ಬರಿಗೆ ಪಾಠ ಮಾಡುವದು ಒಳ್ಳೆಯ ಪ್ರಯತ್ನವೇ, ಆದರೆ ಯಾರಿಗಾದರು ನಮ್ಮ ಜೀವಿತವನ್ನು ಸಮರ್ಪಿಸುವದು, ಯಜ್ಞವೇ ಅದನ್ನು ಮಾಡಲು ನಾವು ಯತ್ನಿಸುವದಿಲ್ಲ. ಇತರೊಂದಿಗೆ, ಈ ದಿನದ ಕೆಲಸದಲ್ಲಿ ಅದನ್ನು ನಾವು ಹಂಚಿಕೊಳ್ಳಬೇಕು. ಜೀವಿತವು ಅಪಾಯದಲ್ಲಿರುವದರಿಂದ, ಆತ್ಮಗಳ ಚಿಂತನೆಯು ಎಚ್ಚರವನ್ನು ಒಳಗೊಂಡಿರುತ್ತದೆ!

**ಚಿಂತನೆಯು ಕಾರ್ಯವನ್ನು ಒಳಗೊಂಡಿರುತ್ತದೆ (ವಚನಗಳು 9-11)**

ಇತರರ ಹಾಗೆ, ಪ್ರಸಂಗಿಗಳು ಮತ್ತು ಬೋಧಕರುಗಳು ಸೋಮಾರಿಗಳಾಗುವದಕ್ಕೆ ಸಾಧ್ಯವಿದೆ. ವಚನ 9ರಲ್ಲಿ, ಪರದೇಶಕ್ಕೆ ಹೋಗಿ ಸುವಾರ್ತೆ ಸಾರುವುದು, ಸಂಕಷ್ಟದ ಕಾರ್ಯವೆಂದು ತಿಳಿಸಲಾಗಿದೆ - ಅದು ಕಷ್ಟಕರವೇ! ಇಲ್ಲಿ ಈ ಘಟನೆಯ ವಿಷಯವೇ ಆಗಿದೆ: ಈ ಪ್ರಸಂಗಿಗಳು ತಮ್ಮ ಸ್ವಂತ ಖರ್ಚಿನಿಂದ ಬೋಧಿಸಿದ್ದರಿಂದ, ಅವರು ಎರಡು ಕೆಲಸಗಳನ್ನು ಮಾಡಬೇಕಾಯಿತು.

ದೇವರ ಸುವಾರ್ತೆಯನ್ನು ಸಾರುವವರಿಗೆ, ಹಣದ ಸಹಾಯವು ಅವಶ್ಯವೆಂದು ದೇವರು ತಿಳಿಸಿರುವದನ್ನು ಪೌಲನು ಅರಿತಿದ್ದನು. ಅಂತಹ ಪ್ರಸಂಗಿಗಳು ಸಹಾಯವನ್ನು ಹೊಂದಲು ಹಕ್ಕುಳ್ಳವರಾಗಿದ್ದರು ಎಂದು ಕೊರಿಂಥದವರಿಗೆ ಬರೆದಿದ್ದನು (1 ಕೊರಿಂಥ 9:6, 7), ಫಿಲಿಪ್ಪಿ ಸಭೆಯವರು ಅವನಿಗೆ ನೀಡಿದ ಕಾಣಿಕೆಗಳಿಗಾಗಿ ಪೌಲನು ಕೃತಜ್ಞನಾಗಿದ್ದನು (ಫಿಲಿಪ್ಪಿ 4:15, 16). ಆ ಸಹಾಯದಿಂದ ಅವನಿಗೂ, ಮತ್ತು ಅದನ್ನು ನೀಡಿದವರಿಗೂ ಆಶೀರ್ವಾದ ಉಂಟಾಯಿತು ಎಂಬ ಅಂಶವನ್ನು ತಿಳಿಸಿದನು (ಫಿಲಿಪ್ಪಿ 4:17).

ಅದೇ ಸಮಯದಲ್ಲಿ, ಪ್ರಸಂಗಿಗಳು ತಮ್ಮ ಸಭೆಯವರಿಂದ ಸಹಾಯಕ್ಕಾಗಿ ಯಾವುದೇ, ಆ ದೇಶವನ್ನು ನೀಡಲಿಲ್ಲ. ಥೆಸಲೋನೀಕದವರು ಈಗಾಗಲೇ ಸಂಕಷ್ಟದಲ್ಲಿದ್ದರಿಂದ, ಅವರ ಮೇಲೆ ಹಣಕಾಸಿನ ಬಾರವನ್ನು ಹಾಕಲಿಲ್ಲ. ಕ್ರೈಸ್ತರ ಉತ್ತೇಜನಕ್ಕೂ ಮತ್ತು ಲಾಬಕ್ಕು ಪ್ರಯೋಜನವಾಗುವಂತೆ ಪ್ರಸಂಗಿಗಳು ತಮ್ಮ ಜೀವಿತವನ್ನು ಸಮರ್ಪಿಸಿದ್ದರು.

ಪ್ರಸಂಗಿಗಳು ಸಹಾಯವನ್ನು ಹೊಂದಲು, ಯೋಗ್ಯರು ಎಂದು ಕ್ರೈಸ್ತರು ಸಹಜವಾಗಿ ಅರ್ಥಮಾಡಿಕೊಳ್ಳಬೇಕು. ಬೋಧಕರುಗಳು ಸಹ ಕಷ್ಟಪಟ್ಟು ದುಡಿಯುವದನ್ನು ಕಲಿತುಕೊಳ್ಳಬೇಕು, ಸಹಾಯ ದೊರಕಲಿ ಅಥವಾ ದೊರಕದೆ ಇರಲಿ ಸುವಾರ್ತೆಯನ್ನು

ಸಾರಲೇಬೇಕು. ಸೋಮಾರಿತನಕ್ಕಾಗಲಿ ಅಥವಾ ಹಗುರ ಮನೋಭಾವನೆಗಾಗಲಿ ಯಾವುದೇ ವಿಧವಾದ ಬೋಧನೆಗಳಿರುವದಿಲ್ಲ.

ಯಾವುದೇ ಕೆಲಸಗಳಿಗೆ, ತರಬೇತಿ, ತಲಾಂತು, ಹಾಗೂ ಸಾಮರ್ಥ್ಯದ ಅಗತ್ಯತೆ ಇರುತ್ತದೆ. ಯಥಾರ್ಥತೆ, ಐಖ್ಯತೆ, ವಿವೇಕ, ಮತ್ತು ಸಹನೆಯು ಕೆಲಸಕ್ಕೆ ಅತ್ಯಗತ್ಯ ಎಂದು ಎಷ್ಟೋ ಸಾರಿ ಕೇಳಿರುವದಿಲ್ಲವೇ? ದೈವ ಭಕ್ತಿಯ ಪಾತ್ರವು ಪರಿಣಾಮಕಾರಿಯಾಗ ಬೇಕಾದರೆ ಇವೆಲ್ಲವು ಅವಶ್ಯವೇ. ದೂರದೃಷ್ಟಿ ಹೊಂದಿರುವ ಬೋಧಕರಲ್ಲಿ ಪ್ರಸಂಗಿಗಳಲ್ಲಿ, ಅಥವಾ ಹಿರಿಯರುಗಳಲ್ಲಿ ಈ ಗುಣಗಳ ಪರಿಶೀಲನೆಯಾಗಿದೆಯೋ? ಕೆಲವು ಸಭೀಕರು, ವಿದ್ಯಾಭ್ಯಾಸವನ್ನು ನಿರರ್ಗಳವಾಗಿ ಮಾತನಾಡುವದನ್ನು, ಮತ್ತು ಅವರ ಕೆಲಸಗಾರರಲ್ಲಿ ಇರುವ ಸಾಧನೆಗಳನ್ನು ನೋಡುತ್ತಾರೆ ವಿನಃ 2:10ರಲ್ಲಿಯ ವೇದ ವಾಕ್ಯದ ಮಾದರಿಗಳನ್ನು ನೋಡುವದಿಲ್ಲ: "... *ನಾವು ಎಷ್ಟೋ ಶುದ್ಧರಾಗಿಯೂ ನೀತಿವಂತರಾಗಿಯೂ ನಿರ್ದೋಷಿಗಳಾಗಿಯೂ* ನಿಮ್ಮಲ್ಲಿ ನಡಕೊಂಡೆವೆಂದು ಸಹೋದರರಾದ ನೀವುಗಳು ತಿಳುಕೊಂಡಿರುವಿರಿ." (ಒತ್ತಿ ಹೇಳಿದ್ದು ನನ್ನದು.) ವಚನ 10 ಮೂರು ವಿಧವಾದ ಸಂಗತಿಗಳನ್ನು ತಿಳಿಸುತ್ತದೆ, ಆದರೆ ಅದರ ವ್ಯತ್ಯಾಸವನ್ನು ತಿಳಿಯಲು ಅಸಾಧ್ಯವಾಗುತ್ತದೆ. ಇಂಥ ಪದಗಳ ಅನುಭಂದವನ್ನು ಈ ಪತ್ರಿಕೆಯ ಅನೇಕ ಭಾಗದಲ್ಲಿ ಬಳಸಲಾಗಿದೆ, ಆದರೆ ಅವುಗಳು ಮೂರು ವ್ಯತ್ಯಾಸಗಳುಳ್ಳ ಅಂಶಗಳಲ್ಲಿ, ಪರಸ್ಪರರನ್ನು ಒಗ್ಗೂಡಿಸಲು ಮತ್ತು ಮುಖ್ಯವಾದ ಗುಣಗಳನ್ನು ಒತ್ತಿ ಹೇಳಲಾಗಿದೆ.

ಉಪದೇಶಕರು ಉಚ್ಚಮಟ್ಟದ ವರ್ತನೆಗಳನ್ನು ಹೊಂದುವುದು ಬಹು ಪ್ರಾಮುಖ್ಯವಾಗಿದೆ. ಅವರು ಮಾಡಿದ ಕಾರ್ಯಗಳನ್ನು, ದೇವರ ಮಟ್ಟದ ಆಲೋಚನೆಗೆ ಅನುಗುಣವಾಗಿ ಸಾಧಿಸಿದರು. ಅವರು ಸರಿಯಾದ ನಿರ್ಣಯವನ್ನು ಕೈಗೊಳ್ಳಲಿಲ್ಲ ಅಥವಾ ಪಾಪಮಾಡಲಿಲ್ಲ ಎಂಬ ತಾತ್ಪರ್ಯವಲ್ಲ. ಅವರ ಎಲ್ಲಾ ಕೆಲಸಗಳನ್ನು ದೇವರ ಮೆಚ್ಚುಗೆಯ ಮಟ್ಟದಲ್ಲಿ ಮಾಡಿದರು, ಆದ್ದರಿಂದ ಕೆಟ್ಟ ಅಥವಾ ಒಳ್ಳೆಯ ಸನ್ನಿವೇಶದಲ್ಲಿ, ದೇವರ ಮಾರ್ಗದರ್ಶನದಂತೆ, ದೇವರ ಉದ್ದೇಶವನ್ನೆ ಸಾಧಿಸಿದರು. ಯಾಕಂದರೆ, "ಪ್ರಸಂಗಿಗಳು ಅವರಿಂದ ಹೊರಟು ಹೋದ ಮೇಲೆ; ಅಪೊಸ್ತಲರು ಇಂಥ ಸಮಸ್ಯೆಯನ್ನು ಪರಿಹರಿಸದೆ ಹೊರಟು ಹೋದರು" ಎಂದು ಹೇಳುವದಕ್ಕೆ, ಥೆಸಲೊನೀಕದವರಿಗೆ ಆಸ್ಪದವನ್ನು ನೀಡಲಿಲ್ಲ.

ವಚನ 11 ಮೂರು ಪದ ಬಂಧವನ್ನು ಬೋಧಕರ ವರ್ತನೆಯ ಬಗ್ಗೆ ತಿಳಿಸುತ್ತದೆ: "... ನಿಮ್ಮಲ್ಲಿ ಪ್ರತಿಯೊಬ್ಬರಿಗೆ *ಬುದ್ಧಿ ಹೇಳುತ್ತಾ ಧೈರ್ಯಪಡಿಸುತ್ತಾ,* ತಂದೆಯು ತನ್ನ ಮಕ್ಕಳಿಗೆ ಹಾಗೋ ಹಾಗೆಯೇ, *ಉತ್ತೇಜನ ಪಡಿಸಿದ್ದೆವು.*" (ಒತ್ತಿ ಹೇಳಿದ್ದು ನನ್ನದು.) ಪುನಃ, ಆ ವಚನದ ಅರ್ಥವನ್ನು ಗ್ರಹಿಸಲು, ಆ ಪದಗಳ ವಿವರಣೆಯು ಅನಗತ್ಯವಾಗಿದೆ. ಅದೂ ಸಹ ಪರಸ್ಪರರನ್ನೂ ಒಂದುಗೂಡಿಸಿ, ಸಂದೇಶವನ್ನು ಒತ್ತಿ ಹೇಳುತ್ತದೆ!

ತನ್ನ ಮಕ್ಕಳನ್ನು ಪರಿಪಕ್ವತೆಗೆ ನಡೆಸಲು, ತಂದೆಯು ಅವರನ್ನು ಉತ್ತೇಜಿಸಿ, ಸಲಹೆಗಳನ್ನು ನೀಡಿ, ಎಚ್ಚರಿಕೆಯನ್ನು ನೀಡಿ. ಅವರನ್ನು ಮುಂದುವರಿಸುವನು, ಅದೇ ಸಮಯದಲ್ಲಿ ಅವರನ್ನು ಅಧೈರ್ಯಪಡಿಸುವದಾಗಲೀ ಅಥವಾ ನಿಂದನೆಯನ್ನಾಗಲೀ ಮಾಡುವದಿಲ್ಲ. ಅದರ ಪ್ರಗತಿಯನ್ನು ಎಫೆಸ 6:4ರಲ್ಲಿ ವಿವರಿಸಲಾಗಿದೆ: "ತಂದೆಗಳೇ, ನಿಮ್ಮ ಮಕ್ಕಳಿಗೆ ಕೋಪವನ್ನೇಬ್ಬಿಸದೆ, ಕರ್ತನಿಗೆ ಮೆಚ್ಚಿಗೆಯಾಗಿರುವ ಬಾಲಶಿಕ್ಷೆಯನ್ನು ಬಾಲೋಪದೇಶವನ್ನು ಮಾಡುತ್ತಾ ಅವರನ್ನು ಸಾಕಿ ಸಲಹಿರಿ." ಮಕ್ಕಳಿಗೆ ಸರಿಯಾದ ಮಾರ್ಗದರ್ಶನವನ್ನು ನೀಡಲು, ತಂದೆ ತಾಯಿಗಳ ಜೀವಿತವು ಮೀಸಲಾಗಿರುವಂತೆ, ಸರಿಬೋಧನೆಯನ್ನು ನೀಡುವ ಪ್ರಸಂಗಿಯು ತನ್ನ ಜೀವಿತವನ್ನು ಮಾದರಿಯಾಗಿ ನೀಡಿ.

ವಿದ್ಯಾರ್ಥಿಗಳ ಪರಿಪಕ್ವತೆಗಾಗಿ, ಬೋಧಕರುಗಳು ಉತ್ತೇಜನ ನೀಡುವ ಸಲಹೆಗಳ ಮೂಲವನ್ನು ಅವಲಂಭಿಸಬೇಕು. ಪ್ರತಿ ಕ್ರೈಸ್ತರು, ತ್ಯಾಗ ಮಾಡಿ, ಅವರ ಸಂಬಂಧಗ

ಳಲ್ಲಿ ತಾಳ್ಮೆಯಿಂದ ಬೋಧಿಸಬೇಕು. 5:11ರಲ್ಲಿ ಈ ಅಂಶವನ್ನು ಗಮನಿಸುತ್ತೇವೆ: "ಒಬ್ಬರನ್ನೊಬ್ಬರು ಸಂತೈಸಿಕೊಳ್ಳುತ್ತಾ ಒಬ್ಬರ ಭಕ್ತಿಯನ್ನೊಬ್ಬರು ವೃದ್ಧಿಪಡಿಸುತ್ತಾ ಇದ್ರಿ, ..." ಆದುದರಿಂದ ವಿವೇಕಿಗಳು, ತಾಳ್ಮೆಯುಳ್ಳವರು ಹಾಗೂ ನಿಂದಾರಹಿತರು ಆಗಿರಲು ಪ್ರಯತ್ನಿಸೋಣ. ದೇವರ ಜನರಿಗಾಗಿ ಕೆಲಸ ಮಾಡುವವರಾಗೋಣ! ಚಿಂತನೆ ಮಾಡುವ ಪೋಷಕರಂತೆ ವರ್ತಿಸೋಣ, ಪ್ರೀತಿಸುವ ತಂದೆ, ಪೋಷಿಸುವ ತಾಯಿಯಂತೆ ಇರೋಣ!

## ದೇವರನ್ನು ಮಹಿಮೆಪಡಿಸುವದೇ ನಮ್ಮ ಗುರಿ (2:12)

ಕ್ರೈಸ್ತ ಜೀವಿತವು ಕ್ರಿಸ್ತನನ್ನೆ ಪ್ರತಿಬಿಂಬಿಸಬೇಕು. ದೈವ ಭಕ್ತಿಯ ಜೀವಿತ ದೇವರನ್ನೆ ಪ್ರಚುರಪಡಿಸಬೇಕು. ಹೊಸ ಒಡಂಬಡಿಕೆಯು "ಯೋಗ್ಯರಾಗಿ" ಜೀವಿಸಬೇಕೆಂಬ ಯೋಚನೆಯನ್ನು ನೀಡುತ್ತದೆ. ಉದಾಹರಣೆಗೆ, 2:12ರಲ್ಲಿ, "ದೇವರ ಕರೆಗೆ ಯೋಗ್ಯರಾಗಿ ನಡೆಯಬೇಕು ಎಂಬ ಕರೆಯನ್ನು ನೀಡಲಾಗಿದೆ ..." ಅದರ ಅರ್ಥವೇನು? ದೇವರು ಅವರ ಜೀವಿತದಲ್ಲಿ ಪರಿಣಾಮವನ್ನು ಉಂಟು ಮಾಡಿರುವನು ಎಂದು ಥೆಸಲೋನೀಕದವರು ಉತ್ತೇಜನಗೊಳ್ಳಬೇಕಿತ್ತು. ಕ್ರೈಸ್ತರು ದೇವರು ಬಯಸುವ ವರ್ತನೆಯಿಂದ ದೇವರು ಯಾರು ಮತ್ತು ಆತನ ಬಯಕೆಗಳೇನು ಎಂದು ಪ್ರಚುರಪಡಿಸಬೇಕಿತ್ತು.

ದೇವರು ಎಂತವನಾಗಿದ್ದಾನೆ ಮತ್ತು ದೇವರ ಬಯಕೆಯನ್ನು ಕಲಿಯುವಂತದ್ದು ಕ್ರೈಸ್ತರು ಪರಿಪಕ್ವತೆಗೆ ಬರುವಂತ ಸೂಚನೆಯಾಗಿರುತ್ತದೆ. ಹೊಸದಾಗಿ ಪರಿವರ್ತನೆ ಹೊಂದಿರುವವರು ದೇವರ ಕುರಿತು ಎಲ್ಲವನ್ನು ಅರಿಯುವ ಅಗತ್ಯತೆಯು ಇರುವದಿಲ್ಲ, ಮತ್ತು ದೇವರ ಚಿತ್ತವನ್ನು ಅರಿಯುವ ಅಗತ್ಯತೆಯಿರುವದಿಲ್ಲ, ಆದರೆ "ಅವರು ಕರ್ತನಿಗೆ ಮೆಚ್ಚಿಕೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳುಕೊಳ್ಳಬೇಕು" (ಎಫೆಸ 5:10). ಕಲಿತುಕೊಂಡು ಮತ್ತು ಈ ನಿಯಮವನ್ನು ಪಾಲಿಸುವದು ಕ್ರೈಸ್ತರ ಬೆಳವಣಿಗೆಯ ಮೂಲವಾಗಿರುತ್ತದೆ.

ವಚನ 12 ದೇವರ ರಾಜ್ಯವನ್ನು ಹಾಗೂ ಮಹಿಮೆಯನ್ನು ಹೊಂದುವದಕ್ಕೆ ಅನರ್ಹರು ಎಂದು ಹೇಳುತ್ತಿರುವದಿಲ್ಲ. ಅದು ದೇವರ ದಾನವಾಗಿರುವದರಿಂದ, ಅದನ್ನು ನಾವು ಸಂಪಾದಿಸಲು ಅಸಾಧ್ಯ. ನಾವು ದೈವ ಭಕ್ತಿಯ ಜೀವಿತವನ್ನು ಜೀವಿಸಬೇಕೆಂಬ ಉದ್ದೇಶವನ್ನು ಅದು ಬೋಧಿಸುತ್ತದೆ, ಮತ್ತು ಅದು ಯೋಗ್ಯವಾದ ಉದ್ದೇಶವಾಗಿರುತ್ತದೆ. ನಮ್ಮ ಸಂಗಡ ದೇವರು ತನ್ನ ರಾಜ್ಯವನ್ನು ಮತ್ತು ಮಹಿಮೆಯನ್ನು ಉದಾರವಾಗಿ ಹಂಚಿಕೊಂಡಿರುವದರಿಂದ ನಾವುಗಳು ಸಂತೋಷವಾಗಿ ಕೃತಜ್ಞರಾಗಿರಬಹುದು! ದೇವರ ಸ್ವಭಾವವನ್ನು ಪ್ರತಿಬಿಂಬಿಸುವ ಜೀವಿತವನ್ನು ಜೀವಿಸಲು ಆತನು ಬಯಸುತ್ತಾನೆ. ಜನರು ನಮ್ಮಲ್ಲಿ ದೇವರನ್ನು ಕಾಣುವರೇ?

## ಮುಕ್ತಾಯ

ಪ್ರತಿಯೊಬ್ಬ ಬೋಧಕನು ಈ ವಚನದಲ್ಲಿರುವ ಪಾಠವನ್ನು ಕಲಿಯುವದಾದರೇ ಎಂತಹ ಮಹತ್ವದ ವ್ಯತ್ಯಾಸವನ್ನು ಕಾಣಬಹುದು! ಬೋಧಿಸುವದಕ್ಕಿಂತ ಮೊದಲು, ಬೋಧನೆಯನ್ನು ಅನುಸರಿಸುವದು. ಎಂತ ಒಳ್ಳೇಯ ಬದಲಾವಣಿಯಾಗಿರುತ್ತದೆ! ದೇವರು ನಮ್ಮಿಂದ ಬಯಸುವಂತ ಜೀವಿತದ ಉದಾಹರಣೆಯನ್ನು ಕೊಡುವುದಾದರೆ ಏನಾಗಬಹುದು? ತಂದೆತಾಯಿಗಳು ಮಕ್ಕಳು ಕಲಿಯಬಯಸುವಂತ ನಿಯಮಗಳನ್ನೂ ತಾವೇ ಅನುಸರಿಸಿದರೇ ಎಂತಹ ಬದಲಾವಣೆ ಉಂಟಾಗಬಹುದು! ಅನೇಕ ಸಭೆಗಳವರು ಮತ್ತು ಕುಟುಂಬಗಳವರು, ಬೋಧಕರುಗಳು ಅಥವಾ ಮಕ್ಕಳು ದೇವರ ಸಂದೇಶವನ್ನು ಬೋಧಿಸುವಲ್ಲಿ ತಮ್ಮ ಜೀವಿತವನ್ನು ಮಾದರಿಯಾಗಿ ತೋರಿಸುವದಾದರೇ ಎಂತಹ ಬದಲಾವಣೆ ಉಂಟಾಗಬಹುದು, ಪ್ರತಿ ಕ್ರೈಸ್ತನು ಮೊದಲು ತನ್ನ ಜೀವಿತದಲ್ಲಿ ಪ್ರಾಯಗಿಕವಾದ ಸಾಕ್ಷಿಯನ್ನು ಜೀವಿಸಿ, ತನ್ನ ಸಹೋದರ ಸಹೋದರಿಯರು ಮಾಡಬೇಕೆಂದು ಅಪೇಕ್ಷಿಸುವ ಕಾರ್ಯಗಳನ್ನು ತಾನೇ

ಮಾಡುವದಾದರೆ ಆ ಕಾರ್ಯವು ಮನೋಹರವಾದ ವ್ಯತ್ಯಾಸವಾಗಿರುತ್ತದೆ!

ನಮ್ಮ ಜೀವಿತದ ಮೂಲಕವಾಗಿ ಇತರರಿಗೆ ಸೇವೆ ಮಾಡುವಂತದ್ದು ಕ್ರೈಸ್ತರ ದೊಡ್ಡ ಪಾತ್ರವಾಗಿರುತ್ತದೆ. ನಮ್ಮ ಬೋಧನೆಯು ಹೆಚ್ಚು ಪರಿಣಾಮಕಾರಿಯಾಗಿದ್ದು ಮತ್ತು ನಮ್ಮ ಜೀವಿತವು ಇನ್ನೂ ಹೆಚ್ಚಾದ ಪ್ರಯೋಜನಕಾರಿಯಾಗಿದ್ದು ಇತರರು ಸಹ ದೇವರ ಜೀವಿತದಲ್ಲಿ ಪಾಲು ತೆಗೆದುಕೊಳ್ಳಲು ಸಹಕಾರಿಯಾಗಿರುತ್ತದೆ! ನಾಯಕನಾದ ಯೇಸುವನ್ನೇ ಅನುಸರಿಸಿರಿ. ಆತನ ಅನುಯಾಯಿಗಳನ್ನು ಅನುಸರಿಸಿರಿ. ನಮ್ಮ ಬೋಧಕರುಗಳು ಕ್ರೈಸ್ತ ಜೀವಿತ ಉತ್ತೇಜಿಸಿರಿ. ಇತರರು ಯೇಸುವನ್ನು ಹಿಂಬಾಲಿ ಸುವಂತೆ ಜೀವಿತವು ಪರಿಣಾಮಕಾರಿಯಾಗಿರಲಿ.